ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು):—

ಅ) ಸಣ್ಣ ನೀರಾವರಿ ಕೆಲಸಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಇಲ್ಲ.

ಇ) ಹಣಕಾಸಿನ ಲಭ್ಯತೆಯನ್ನವಲಂಬಿಸಿ ಹಂತ-ಹಂತವಾಗಿ ಕಾಲುವೆಗೆ ಲೈನಿಂಗ್ ಮಾಡುವುದು ಮತ್ತು ಮಂಜೂರಾದ ಬೆಳೆಗಳ ವಿಧಾನವನ್ನು ಆಳವಡಿಸಿಕೊಳ್ಳುವಂತೆ ಒತ್ತಾಯ ತರುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಹೊಸ ವಿದ್ಯಾರ್ಥಿ ನಿಲಯಗಳ ಮಂಜೂರಾತಿಯ ಬಗ್ಗೆ

೧೩೦೩. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೪-೮೫ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ರಾಜ್ಯದಲ್ಲಿ ಒಟ್ಟು ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿ ಎಷ್ಟು? ಮತ್ತು ನಿರ್ದಿಷ್ಟವಾಗಿ ಗುಲ್ಬರ್ಗಾ ಜಿಲ್ಲೆಯವರಿಗೆ ಪ್ರಾರಂಭವಾದ ಹೊಸ ವಿದ್ಯಾರ್ಥಿನಿಲಯಗಳು ಎಷ್ಟು?

ಆ) ಗುಲ್ಬರ್ಗಾ ಜಿಲ್ಲೆ ಯಾದಗಿರಿ ತಾಲ್ಲೂಕಿನ ಗಜಾರ್ ಜೊಟ್ ಗ್ರಾಮಕ್ಕೆ ಪರಿಶಿಷ್ಟ ಜಾತಿಯವರಿಗಾಗಿ ಮಂಜೂರಾದ ಹೊಸ ಸರ್ಕಾರಿ ವಿದ್ಯಾರ್ಥಿನಿಲಯ ಇತರ ಸ್ಥಳಕ್ಕೆ ವರ್ಗಾಯಿಸಿರುವುದು ನಿಜಾಂಶವಲ್ಲವೇ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು?

ಈ) ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದಲ್ಲಿ ಹಾಲಿ ಇರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಗಾಜರ್ ಕೋಟೆಯ ಗ್ರಾಮಸ್ಥರಿಂದ ಈ ಬಗ್ಗೆ ಏನಾದರೂ ಮನವಿ ಸಲ್ಲಿಸಲಾಗಿದೆಯೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು) —

ಅ) ೧೯೮೪-೮೫ನೇ ಸಾಲಿನಲ್ಲಿ ಎರಡು ಪದವಿ ಪೂರ್ವ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಯಿತು. ಗುಲ್ಬರ್ಗಾ ಜಿಲ್ಲೆಗೆ ಮಂಜೂರು ಮಾಡಿಲ್ಲ.

ಆ) ಹೌದು, ಅದನ್ನು ಕಂಡ್ಯೂರಿಗೆ ವರ್ಗ ಮಾಡಲಾಯಿತು.

ಇ) ಗಾಜರ್‌ಕೋಟೆಯಲ್ಲಿ ಸಾಕಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಲಭ್ಯವಿಲ್ಲದ ಕಾರಣ ಮತ್ತು ಕಂಡ್ಯೂರಿಗೆ ಅತ್ಯಾವಶ್ಯಕವಾಗಿ ವಿದ್ಯಾರ್ಥಿನಿಲಯ ತೆರೆಯಬೇಕಾಗಿ ಬಂದುದರಿಂದ ಈ ಮಂಜೂರಾಗಿದ್ದ ನಿಲಯವನ್ನು ವರ್ಗಾವಣೆ ಮಾಡಬೇಕಾಯಿತು.

ಈ) ಹೌದು.

ಉ) ಪರಿಶೀಲಿಸಲಾಗುವುದು.

ಸುಪ್ರೀಂ ಕೋರ್ಟ್ ತಡೆ ಆಜ್ಞೆ ನೀಡಿದ ದಿನಗೂಲಿ ನೌಕರರ ಬಗ್ಗೆ

೬೫೦. ಶ್ರೀ ಗೋಪಾಲ ಮಂಕುಂದ ಕಾನಡೆ (ಸಿರ್ಸಿ). ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆದಯವಿಟ್ಟು ಉತ್ತರಿಸುವವರೆ?

ಅ) ದಿನಗೂಲಿ ನೌಕರರನ್ನು ವಜಾ ಮಾಡಿರುವುದರ ಬಗ್ಗೆ ಸುಪ್ರೀಂಕೋರ್ಟು ಯಾವಾಗ ತಡೆ ಆಜ್ಞೆ ನೀಡಿತು?

ಆ) ತಡೆ ಆಜ್ಞೆ ಆದ ನಂತರ ಎಷ್ಟು ಜನರನ್ನು ಕೆಲಸದಿಂದ ತೆಗೆಯಲಾಯಿತು?

ಇ) ಸುಪ್ರೀಂ ಕೋರ್ಟು ತಡೆ ಆಜ್ಞೆ ನಿಂದನೆ ಮಾಡಲು ಕಾರಣಗಳೇನು?

ಈ) ತಡೆ ಆಜ್ಞೆ ನಿಂದನೆ ಬಗ್ಗೆ ಸರಕಾರದದ ಮುಖ್ಯ ಕಾರ್ಯದರ್ಶಿಯವರು ಕ್ಷಮಾಪಣೆ ನೀಡಿದ್ದಾರೆಯೆ?

ಉ) ತಡೆ ಆಜ್ಞೆ ನಿಂದನೆಯಿಂದ ಸರಕಾರದವರಿಗೆ ಆದ ಒಟ್ಟು ವೆಚ್ಚ ಎಷ್ಟು?

ಊ) ತಡೆ ಆಜ್ಞೆ ನಿಂದನೆಗೆ ಕಾರಣರಾದವರ ಬಗ್ಗೆ ಕೈಗೊಂಡ ಶಿಸ್ತಿನ ಕ್ರಮಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು)

ಅ) ದಿನಾಂಕ ೨೫-೭-೮೫ರಂದು ತಡೆ ಆಜ್ಞೆ ನೀಡಿತು.

ಆ) ಕೆಲಸದಿಂದ ತೆಗೆದು ಹಾಕಲ್ಪಟ್ಟವರ ಸಂಖ್ಯೆ ಸುಮಾರು ೯೦೦೦ ಇರಬಹುದೆಂದು ಅಂದಾಜು ಮಾಡಲಾಗಿದೆ.

ಇ) ದಿನಾಂಕ ೧-೪-೮೫ಕ್ಕಿಂತ ಹಿಂದೆ ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ಆಧಾರದ ಮೇಲೆ ನೇಮಕವಾದ ನೌಕರರನ್ನು ಖಾಯಂಗೊಳಿಸುವ ದೃಷ್ಟಿಯಿಂದ ಲೋಕೋಪಯೋಗಿ, ಕಾಡ ಮಂತ್ತು ವಿದ್ಯುಚ್ಛಕ್ತಿ ಇಲಾಖೆಯು ದಿನಾಂಕ ೧-೪-೮೫ರಂದು ದಿನಗೂಲಿ ಆಧಾರದ ಮೇಲೆ ನೇಮಿಸಿ ಕೊಳ್ಳುವುದನ್ನು ನಿಷೇದಿಸಿತು ದಿನಾಂಕ ೧-೪-೮೫ಕ್ಕಿಂತ ಹಿಂದೆ ನೇಮಕವಾದ ಬಹು ಸಂಖ್ಯೆಯಲ್ಲಿದ್ದ ದಿನಗೂಲಿ ನೌಕರರನ್ನು ಖಾಯಂಮಾತಿಗೆ ಅನುವು ಮಾಡುವ ಸಲುವಾಗಿ ನಿಷೇದಾಜ್ಞೆಯ ಉಲ್ಲಂಘನೆ ಯಿಂದ ನೇಮಕವಾದ ಎಲ್ಲಾ ದಿನಗೂಲಿ ನೌಕರರನ್ನು ಕೆಲಸದಿಂದ ತೆಗೆದ ಹಾಕಲು ದಿನಾಂಕ ೨೨-೪-೮೫ರಂದು ಲೋಕೋಪಯೋಗಿ ಇಲಾಖೆಯು ಎಲ್ಲಾ ಅಧಿಕಾರಿಗಳಿಗೆ ನಿರ್ದೇಶನ ನೀಡಿತು. ಈ ಸಂದರ್ಭದಲ್ಲಿ ಸಂಪ್ರೀಂಕೋರ್ಟು ಕೊಟ್ಟಿದ್ದ ತಡೆಯಾಜ್ಞೆಗೆ ಅಚಾಗ್ರತೆಯಿಂದ ಗಮನಹರಿಸಲು ಸಾಧ್ಯ ವಾಗಲಿಲ್ಲ.

ಈ) ಹೌದು.

ಉ) ಕೆಲಸದಿಂದ ತೆಗೆದುಹಾಕಲಾದ ಕೆಲಸಗಾರರು ಕೆಲಸಕ್ಕೆ ತಿರುಗಿ ಬಂದು ಅವರಿಗೆ ಹಿಂದಿನ ಸಂಬಳ ಪಾವತಿ ಆದ ಮೇಲೆ ಮಾತ್ರ ಇದನ್ನು ತಿಳಿಯಲು ಸಾಧ್ಯ.

ಊ) ಈ ಬಗ್ಗೆ ಸರ್ವೋನ್ನತ ನ್ಯಾಯಾಲಯದ ಅಂತಿಮ ತೀರ್ಪು ಹೊರಬೀಳುವವರೆಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೇಂದ್ರ ಸರಕಾರವು ಸಂವಿಧಾನದ ಅನುಚ್ಛೇದ ೨೭೫ (೧)ರಲ್ಲಿ ಗಿರಿಜನ ಉಪಯೋಜನೆಯ ಬಗ್ಗೆ

*೫೬೨. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ) — ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫-೮೬ನೇ ಸಾಲಿನಲ್ಲಿ ಕೇಂದ್ರ ಸರಕಾರವು ಸಂವಿಧಾನದ ಅನುಚ್ಛೇದ ೨೭೫ (೧)ರಲ್ಲಿ ರಾಜ್ಯ ಸರ್ಕಾರಕ್ಕೆ ರೂ. ೧,೫೨,೦೦,೦೦೦ಗಳನ್ನು ಗಿರಿಜನ ಉಪಯೋಜನೆಯಲ್ಲಿ ಒದಗಿಸಿದ್ದಾರೆಯೆ?

ಆ) ಹಾಗಿದ್ದಲ್ಲಿ ಜಾರಿಗೊಳಿಸಿದ ಕಾರ್ಯಕ್ರಮಗಳು ಹಾಗೂ ಅದಕ್ಕೆ ತಗಲಿದ ವೆಚ್ಚವೇನು?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು)

ಆ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕಾರ್ಯಾಚರಣೆಯಲ್ಲಿರುವ ವಿಶ್ವ ಬ್ಯಾಂಕ್ ನೆರವಿನ ಸಣ್ಣ ನೀರಾವರಿ ಯೋಜನೆಯ ಬಗ್ಗೆ

*೫೬೩. ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ)— ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ, ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಾರ್ಯಾಚರಣೆಯಲ್ಲಿರುವ ವಿಶ್ವ ಬ್ಯಾಂಕ್ ನೆರವಿನ ಸಣ್ಣ ನೀರಾವರಿ ಯೋಜನೆ ಗಳ ಸಂಖ್ಯೆ?

ಆ) ಆ ಯೋಜನೆಗಳ ಹೆಸರುಗಳು, ಅಂದಾಜುಗಳು ಮತ್ತು ಯೋಜನೆಗಳ ಬಗ್ಗೆ ವಿಶ್ವ ಬ್ಯಾಂಕ್ ನಿಂದ ಪಡೆದ ನೆರವು ಮತ್ತು ಪಡೆಯಬೇಕಾದ ನೆರವು?

ಇ) ಆ ಯೋಜನೆಗಳಲ್ಲಿ ಕಾಮಗಾರಿಗಳು ಪ್ರಾರಂಭವಾದ ತಾರೀಖು, ಅವುಗಳನ್ನು ಪೂರ್ಣಗೊಳಿ ಸಲು ನಿಗದಿತವಾದ ಕಾಲ ಮತ್ತು ಅವುಗಳನ್ನು ಕಾರ್ಯಗತ ಮಾಡುತ್ತಿರುವ ಏಜೆನ್ಸಿಗಳು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ಸಣ್ಣ ನೀರಾವರಿ ಮಂತ್ರಿಗಳು).—

ಅ) ವಿಶ್ವ ಬ್ಯಾಂಕ್ ನೆರವಿನೊಡನೆ ೭೧ ಕೆರೆ ಯೋಜನೆಗಳು ನಿರ್ಮಾಣದ ಹಂತದಲ್ಲಿವೆ.

ಆ) ಈ ಯೋಜನೆಗಳ ಹೆಸರುಗಳು ಮತ್ತು ಅವುಗಳ ಅಂದಾಜು ವೆಚ್ಚಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ತಿಳಿಸಲಾಗಿದೆ. ವಿಶ್ವ ಬ್ಯಾಂಕ್‌ನಿಂದ ಇದುವರೆಗೆ ಸ್ವೀಕರಿಸಿದ ಒಟ್ಟು ಹಣ ೧೬.೫೦ ಮಿಲಿಯನ್ ಡಾಲರ್‌ಗಳು ಹಾಗೂ ಇನ್ನೂ ಸ್ವೀಕರಿಸಬೇಕಾಗಿರುವ ಒಟ್ಟು ಹಣ ೩೭.೫೦ ಮಿಲಿಯನ್ ಡಾಲರ್‌ಗಳಾಗಿವೆ.

ಇ) ಈ ಯೋಜನೆಗಳನ್ನು ಕಾರ್ಯಗತ ಮಾಡುತ್ತಿರುವ ಗುತ್ತಿಗೆದಾರರ ಹೆಸರುಗಳು ಪ್ರಾರಂಭಿಸಿದ ತಾರೀಖು ಮತ್ತು ಪೂರ್ಣಗೆ ಗಳಿಸಲು ನಿಗದಿತವಾದ ತಾರೀಖು, ಇವುಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ತಿಳಿಸಲಾಗಿದೆ.